


ಗೊತ್ತು?

'ಸಿಟ್ಟಾಗಬೇಡಿ ಸಾರ್. ಇತ್ತೀಚೆಗೆ ಒಬ್ಬ ಸ್ವಾಮೀಜಿ ಹೇಳಿದ್ದಾರಲ್ಲ – ಸಂಸ್ಕೃತ ಗೊತ್ತಿರುವವರಿಗೆ ಮಾತ್ರ ಸ್ವರ್ಗಕ್ಕೆ ಪ್ರವೇಶ ಅಂತ, ಅದಕ್ಕೆ ಹೇಳಿದೆ ಅಷ್ಟೇ?' ತನ್ನ ಹೇಳಿಕೆಗೆ ಸಮಜಾಯಿಷಿ ನೀಡಿದರು. ನನ್ನ ಸಮಾಧಾನಿಸಲು. 'ನಿಮ್ಮ ತಾಯಿಗೆ ಸ್ವರ್ಗ ಸಿಕ್ಕಿರಲೂಬಹುದು' ಎಂದರು.

'ಅದು ಹೇಗೆ?'

'ಸ್ವಾಮೀಜಿ ಹೇಳಿದ್ದು ಒಂದೆರಡು ತಿಂಗಳ ಹಿಂದೆ. ನಿಮ್ಮ ತಾಯಿ ಸತ್ತಿದ್ದು ಎರಡು ವರ್ಷದ ಹಿಂದೆ. ಸರ್ಕಾರಿ ಆದೇಶದಂತೆ ಯಾವುದೇ ನಿರ್ಣಯ ಜಾರಿಗೆ ಬರುವುದು ಆದೇಶ ಹೊರಡಿಸಿದ ದಿನದಿಂದ'.

ಒಟ್ಟಾರೆ ತನ್ನ ಹೇಳಿಕೆಯ ತೀವ್ರತೆಯನ್ನು ಕಡಿಮೆಮಾಡಲು ಪರಿತಪಿಸುತ್ತಿದ್ದ ಗುರುಲಿಂಗಯ್ಯ.

'ನನಗೆ ಸಂಸ್ಕೃತ ಬರಲ್ಲ. ಸತ್ತ ಮೇಲೆ ಸ್ವರ್ಗಕ್ಕೆ ಎಂಟ್ರಿ ಇಲ್ಲ. ಅದರ ಬಗ್ಗೆ ಅಷ್ಟು ಚಿಂತೆ ಇಲ್ಲ ಸಾರ್' ಎಂದು ನನ್ನ ತಾಯಿ ಸ್ವರ್ಗವಾಸಿಯಾಗಿಲ್ಲ ಎಂಬ ಮರುಕದ ಜೊತೆಗೆ, ಅವರ ಮುಂದಿನ ಸಾವಿನ ನಂತರದ ಘಟನೆಗಳನ್ನು ಸಮೀಕರಿಸಿದರು.

ಪುಸಲಾಯಿಸಲು 'ಸಂಸ್ಕೃತ ಕಲಿರಿ, ಆಗ ಸ್ವರ್ಗಕ್ಕೆ ಹೋಗಬಹುದು' ಎಂದೆ.

'ನನಗೆ ಮಾತ್ರ ಆ ಸ್ವರ್ಗ ಬೇಡ. ಸ್ವರ್ಗ ನರಕ ಎಲ್ಲಾ ಇದೇ ಜೀವನ. ಆ ದೇವರು ಒಳ್ಳೆಯ ಆರೋಗ್ಯ ಕೊಟ್ಟಿದ್ದಾನೆ. ಅಕಸ್ಮಾತ್ ಸ್ವರ್ಗಕ್ಕೆ ಹೋದ್ರೆ ಅಲ್ಲಿ ಅಷ್ಟು ಆರೋಗ್ಯ ಇರಲ್ಲ' ಎಂದ ಗುರುಲಿಂಗಯ್ಯನ ಹೇಳಿಕೆ, ಸ್ವರ್ಗದ ವಾಸಿಗಳು ಇವರ ಬಳಿಗೆ ಬಂದು ಅಲ್ಲಿನ ಆರೋಗ್ಯದ ಸ್ಥಿತಿಯ ವರದಿ ಕೊಟ್ಟಿದ್ದಾರೆ ಎನ್ನುವಂತಿತ್ತು.

'ಯಾರಾದ್ರು ಅಲ್ಲಿಂದ ಬಂದು ನಿಮ್ಮನ್ನು ಭೇಟಿ ಮಾಡಿದ್ರಾ?'

ಮಾತಿನ ವ್ಯಂಗ್ಯದ ಮರ್ಮ ಅರಿತು ನಕ್ಕ ಗುರುಲಿಂಗಯ್ಯ 'ನಮ್ಮ ಹಿಂದೂಗಳಿಗಷ್ಟೆ ಸ್ವರ್ಗದ ಪರಿಕಲ್ಪನೆ ಇರುವುದು. ಪ್ರಪಂಚದಲ್ಲಿ ಹಿಂದೂಗಳ ಜನಸಂಖ್ಯೆ ನೂರು ಕೋಟಿ. ಅದರಲ್ಲಿ ಸಂಸ್ಕೃತ ಬರೋದು ಒಂದೆರಡು ಕೋಟಿ ಜನಕ್ಕೆ. ಸ್ವಾಮೀಜಿ ಹೇಳಿದಂತೆ ಅವರೆಲ್ಲರೂ ಸ್ವರ್ಗಕ್ಕೆ ಹೋದ್ರು ಒಂದೇ ಸಮುದಾಯದ ಜನ. ಅವರಲ್ಲಿ ಮದುವೆ ಆಗಿ, ಇನ್‌ಬ್ರೀಡಿಂಗ್ ಆಗಿ, ಮಕ್ಕಳಿಗೆ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತೆ. ಆರೋಗ್ಯ ಸಮಸ್ಯೆ ಹೆಚ್ಚಾಗುತ್ತೆ'.

'ಸೈನ್ಸ್ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೀರಿ?'

'ಇದು ನಮ್ಮ ಇಲಾಖೆಯವರಿಗೆ ಒಂದು ರೀತಿಯ ಕಾಮನ್‌ಸೆನ್ಸ್ ಸರ್' ಎಂದರು.

'ಹಾಗಾದ್ರೆ, ಕಾಮನ್‌ಸೆನ್ಸ್‌ನಲ್ಲಿ ಹಲವು ಬಗೆಗಳಿವೆ?' ಎಂದು ಗುರುಲಿಂಗಯ್ಯರತ್ತ ಗಮನಿಸಿದೆ. ಓದಿದ್ದು ಸಾಮಾನ್ಯ ಡಿಗ್ರಿಯಾದ್ರೂ ಒಮ್ಮೊಮ್ಮೆ ವಿಜ್ಞಾನಿ, ವೇದಾಂತಿ, ಸಮಾಜಶಾಸ್ತ್ರಜ್ಞನ ದರ್ಶನವಾಗುತ್ತಿತ್ತು. ಎಲ್ಲಕ್ಕಿಂತ ಮೇಲಾಗಿ ಕಾಮನ್‌ಸೆನ್ಸ್ ಬಹಳ ಇತ್ತು. ಜೀವನಾನುಭವ ವಯಸ್ಸಿನೊಡನೆ ಮೇಳೈಸಿತ್ತು. ರೆವಿನ್ಯು ಇನ್‌ಸ್ಪೆಕ್ಟರ್ ಆದ್ರೂ ನಮ್ಮಿಬ್ಬರ ನಡುವೆ ಸೀನಿಯಾರಿಟಿ ಮತ್ತು ಶಿಷ್ಟಾಚಾರದ ಹಂಗಿಲ್ಲದ ಬಾಂಧವ್ಯ ಬೆಳೆದಿತ್ತು. ಚುಡಾಯಿಸುವ ಆಸೆಯಿಂದ 'ಸ್ವರ್ಗದ ಸುರಾಪಾನದ ಅದೃಷ್ಟ ನಿಮಗೆ ಸಿಗಲ್ಲ' ಎಂದೆ.

'ಈಗ್ಲೂ ಇಲ್ಲ. ಮುಂದೂ ಬೇಡ. ರೋಗಿಷ್ಟನಾಗಿ ಸ್ವರ್ಗದಲ್ಲಿ ಜೀವಿಸುವ ಬದಲು ಆರೋಗ್ಯದಿಂದ ನರಕದಲ್ಲಿ ಇರ್ತೀನಿ'.

'ಆರೋಗ್ಯದ ಮೇಲೆ ನಿಮಗೆ ಅಷ್ಟೋಂದು ಕಾಳಜಿಯೇ?'

'ಹೌದು ಸಾರ್. ಶ್ರೀಮಂತ ರೋಗಿ ರಾಜನಿಗಿಂತ ಭಿಕಾರಿ; ಆರೋಗ್ಯವಂತ ಭಿಕ್ಷುಕ ಅವನಿಗಿಂತ ಶ್ರೀಮಂತ. ಸ್ವರ್ಗ, ನರಕ, ಸಾವಿನ ನಂತರ ತಲೆಕೆಡಿಸಿಕೊಳ್ಳುವುದು ಬೇಡ. ವರ್ತಮಾನದಲ್ಲಿ ಸಂತಸದ ಬದುಕು ಬದುಕೋಣ' ಎಂದ ಗುರುಲಿಂಗಯ್ಯ ಸ್ವಾಮೀಜಿಯಾದಂತೆ ಕಂಡರು.

ಅಷ್ಟರಲ್ಲಿ ಅರುಣ್‌ಕುಮಾರ್ ಸಾಹೇಬರ ವಾಹನ ಬಂದು ನಿಂತಿದ್ದ ನಮ್ಮ ಸರ್ಕಾರಿ ಜೀಪ್ ಗಮನಿಸಿ ನಿಲ್ಲಿಸಿದರು. ಗ್ರಾಮಲೆಕ್ಕಿಗ ತಂದು ಕೊಟ್ಟ ಹೂಗುಚ್ಛವನ್ನು ಎಡಗೈಯಲ್ಲಿ ಹಿಡಿದು, ಬಲಗೈಯಿಂದ ನಮಸ್ಕರಿಸಿದೆ. ಇನ್ನೋವಾ ವಾಹನದ ಮುಂದಿನ ಸೀಟಿನಲ್ಲಿ ಕೂತಿದ್ದ ಸಾಹೇಬರಿಗೆ ಎರಡು ಕೈಗಳಿಂದ ಹೂಗುಚ್ಛ ನೀಡಿದೆ.

ಸಾಹೇಬರು ಕುಟುಂಬ ಸಮೇತ ಬಂದಿದ್ದರು. ಅವರ ಶ್ರೀಮತಿ ಮತ್ತು ಮತ್ತೊಬ್ಬರು ಇದ್ದರು. ಸರ್ಕಾರಿ ಶಿಷ್ಟಾಚಾರದಂತೆ ಜಿಲ್ಲಾಧಿಕಾರಿಗಳ ಅಧಿಕೃತ ವಾಹನದಲ್ಲಿ ಕೂರಲು ಒಪ್ಪಿಕೊಂಡ ಸಾಹೇಬರಿಗೆ ಗನ್‌ಮ್ಯಾನ್ ವಾಹನದ ಬಾಗಿಲು ತೆಗೆದ. ಸಾಹೇಬರ ಜೊತೆ ಮತ್ತೊಬ್ಬರು ಸರ್ಕಾರಿ ವಾಹನ ಏರಿದರು. ಅವರು ಬಿಳಿ ಅಂಗಿ ಶುಭ್ರ ಪಂಚೆ ಧರಿಸಿದ್ದರು. ಹತ್ತು ಬೆರಳುಗಳಿಗೂ ಬಣ್ಣ ಬಣ್ಣದ ಉಂಗುರ. ಕುತ್ತಿಗೆಯಲ್ಲಿ ಹತ್ತಾರು ಮಣಿಮಾಲೆ. ಕಿವಿಯಲ್ಲಿ ಓಲೆ. ಕೈಗಳಲ್ಲಿ ಕಪ್ಪು ಕೆಂಪು ದಾರಗಳು. ಆ್ಯಪಲ್ ಐಫೋನ್ ವಾಚ್. ಬೊಕ್ಕತಲೆ ತುಂಬಾ ಅರಿಶಿಣ ಮಿಶ್ರಿತ ಶ್ರೀಗಂಧದ ಲೇಪನ. ತಲೆ ಚಿನ್ನದ ತಟ್ಟೆಯಂತೆ ಸೂರ್ಯನ ಬೆಳಕಿಗೆ ಮಿಂಚುತಿತ್ತು. ದೈತ್ಯದೇಹಕ್ಕೆ ವೇಷಭೂಷಣ ಆಕರ್ಷಕವಾಗಿತ್ತು. ಸಾಹೇಬರ ಶ್ರೀಮತಿ ಅವರ ಖಾಸಗಿ ಕಾರಿನಲ್ಲೇ ಉಳಿದರು. ನಮ್ಮ ಜೀಪ್ ಅನ್ನು ಸಾಹೇಬರ ವಾಹನ ಹಿಂಬಾಲಿಸಿತು.

ಗುರುಲಿಂಗಯ್ಯನ ಪೂರ್ತಿ ಮನಸ್ಸು ದೈತ್ಯ ದೇಹದ ಮನುಷ್ಯನ ಸುತ್ತ ಗಿರಕಿ ಹೊಡೆಯುತ್ತಿತ್ತು.

'ಅವ್ರು ನೋಡಿದ್ರೆ, ಯಾರೋ ಜೋತಿಷಿ ಇರ್ಬೇಕು. ಸಾಹೇಬರ ಸಂಬಂಧೀನು ಇರಬಹುದು'.

ನನ್ನಿಂದ ಸಿಗದ ಪೂರಕ ಪ್ರತಿಕ್ರಿಯೆಯಿಂದಾಗಿ ಅವರ ಊಹೆ ವಿಸ್ತಾರಗೊಳ್ಳಲು ಸಾಧ್ಯವಾಗಲಿಲ್ಲವೆಂದೆನಿಸಿತು.

'ಏನೇ ಹೇಳಿ ಸಾರ್. ಇಂತಹವರೆಲ್ಲಾ ಮನಃಶಾಂತಿ ಹಾಳು ಮಾಡ್ತಾರೆ. ಅವರ ಜೇಬು ತುಂಬುತ್ತೆ ಅಷ್ಟೆ'.

'ಅಂತಹವರಿಂದ ನಿಮಗೆ ಏನಾಗಿದೆ?' ಗುರುಲಿಂಗಯ್ಯಗೆ ಪ್ರಶ್ನಿಸಿದೆ.

'ನನಗಲ್ಲ. ಸಮಾಜಕ್ಕೆ ಕಂಟಕರು ಇವರು'.

'ಅದ್ಹೇಗೆ ಹೇಳ್ತೀರಾ?'